ವ್ಯಕ್ತಿಗಳೊಂದಿಗೆ ಅಂದಿನ ವೆಂಕಟಸುಬ್ಬಯ್ಯನ ಜೀವನಚರಿತ್ರೆ ಕೇಳಲು ಹೊರಟಾಗ ಅವರ ಮಾತಿಗೆಲ್ಲ ಜೋತು ಬಿದ್ದು, ಈ ಕೇಳಿಕೆಯಲ್ಲಿ ನಿಜವೆಷ್ಟು ಅವರು ಹೇರಿದ್ದೆಷ್ಟು ಎಂದು ಸ್ಪಷ್ಟವಾಗಿ ತಿಳಿಯಲಾರದೆ ಅವರು ಹೇಳಿದ್ದು ಹೀಗೆ ಎಂದಿದ್ದಾರೆ. ‘ಹಂಸಗೀತೆ’ಯ ವಾಸ್ತವಿಕ ಜಾಡಿನ ಚಿತ್ರೀಕರಣವನ್ನು ನಾನು ಮಾಡಿಲ್ಲ. ‘ಹಂಸಗೀತೆ’ಯನ್ನು ದೃಶ್ಯಕಾವ್ಯವನ್ನಾಗಿಸುವ ಪ್ರಯತ್ನವನ್ನು ನಾನು ಮಾಡಿದ್ದೇನೆ”.

## ಮೌನದ ಪರಿಧಿಯಲ್ಲಿ ಅರ್ಥ ಸೂಕ್ಷ್ಮ ಶಬ್ದಗಳ ಬಳಕೆ

“ಕಾರ್ಲ್ ಥಿಯೋಡೋರ್ ಡ್ರಯರ್‌ನ ‘The Passion of Joan of Arc’ ಮೂಕಿ ಚಿತ್ರ ನೋಡಿದಾಗ ನನಗನ್ನಿಸಿದ್ದು – ಬಹುಶಃ ಈ ಚಿತ್ರ ‘ಹಂಸಗೀತೆ’ಯಲ್ಲಿ ಮಾತಿಗೆ ಅಂಕುಶ ಹಾಕಲು ನನ್ನನ್ನು ಪ್ರೇರೇಪಿಸಿರಬಹುದು. ‘ಹಂಸಗೀತೆ’ಯ ವಾಸ್ತವಿಕ ಜಾಡಿನ ಚಿತ್ರೀಕರಣ ನಾನು ಮಾಡಿಲ್ಲ. ಆ ಕಥೆಯನ್ನು ಕಾವ್ಯವಾಗಿಸುವ ಪ್ರಯತ್ನ ಮಾಡಿದ್ದೇನೆ. ಇಲ್ಲಿನ ದೃಶ್ಯ, ಶಬ್ದ, ಸಂಗೀತಗಳು ರಸಪ್ರಜ್ಞೆಯಾಗಬೇಕೆಂದು ನಾನು ಯೋಚಿಸಿದೆ. ಶಬ್ದಗಳು ಇಲ್ಲಿ ಸಜೀವ ವಸ್ತುಗಳು. ಲಿಪಿಯಂತೆ ಚಿಹ್ನೆಗಳಲ್ಲ. ಮೌನದ ಪರಿಧಿಯಲ್ಲೆಲ್ಲ ಅರ್ಥಸೂಕ್ಷ್ಮ ಶಬ್ದಗಳೇ ಬಳಕೆಯಾಗಿವೆ. ಇಲ್ಲಿನ ಪ್ರತಿಮಾ ಕಲ್ಪನೆ, ಸಹಜವಾದ ನಡೆನುಡಿ, ಬೆಳಕು, ಬಣ್ಣ, ಪರಿಸರಗಳಲ್ಲೇ ಹೆಚ್ಚು ಮೂಡಿಸುವ ಪ್ರಯತ್ನ ಮಾಡಿದ್ದೇನೆ. ಈ ಚಿತ್ರದ ಮೂರು ಷಾಟ್‌ಗಳಲ್ಲಿ ಕಾದಂಬರಿಯ ಮೂವತ್ತು ಪುಟಗಳಿಗೆ ಮೀರಿದ ಕಥಾವಸ್ತು ಅಡಕವಾಗಿದೆ. ಕಾದಂಬರಿಕಾರರ ಧ್ವನಿಯನ್ನು ನಾನೆಲ್ಲೂ ಬಿಟ್ಟಿಲ್ಲ. ಮಾತು ವಿಸ್ತಾರವಾಗಿ ಮಸೆಮಸೆದು ಹೇಳುವ ನೂರು ಪುಟದ ವರ್ಣನೆಯನ್ನು ಮೌನವಾದ ದೃಶ್ಯವೊಂದು ತೋರಿಸಬಲ್ಲದೆಂಬುದು ನನ್ನ ಭಾವನೆ. ಮೌನದೊಳಗಿನ ನೂರಾರು ವೇದನೆಗಳ ಹಿನ್ನೆಲೆಯಲ್ಲಿ ಶಬ್ದ ಸ್ವರೂಪ ಒಂದು ಆಂದೋಲನವನ್ನೇ ಮಾಡುತ್ತದೆ ಎಂಬುದು ನನ್ನ ನಂಬಿಕೆ. ನನ್ನ ಭಾವನೆಯೇ ಸರಿ ಎಂದು ಶಾಸನ ಬರೆಯುತ್ತಿಲ್ಲ. ದೃಶ್ಯಕ್ಕೆ ಆ ಶಕ್ತಿಯಿಲ್ಲ ಎಂದು ಯಾರಾದರೂ ನಿರೂಪಿಸಿಕೊಟ್ಟಾಗ ಮತ್ತೆ ಅವರಲ್ಲಿ ಪಾಠ ಕಲಿಯುವ ಎಳೆಯನಾಗುತ್ತೇನೆ. ನಮ್ರವಾಗಿ ಕಲಿಯುವ ತಿಳಿವಳಿಕೆ ನನಗೆ ಈ ಇಳಿ ವಯಸ್ಸಿನಲ್ಲಿ ಬಂದಿದೆ. ನನಗೆ ಹುಡುಗನ ಹುರುಪು ಹುದುಗಿದೆ” ಎನ್ನುವ ಅಯ್ಯರ್ ಮೊತ್ತ ಮೊದಲು ಕ್ಯಾಮೆರಾವನ್ನು ಹಿಡಿಂಬೇಶ್ವರನ ದೇವಾಲಯದ ಮೇಲುಛಾವಣಿಯ ಕೊಕ್ಕೆಯನ್ನು ಹುಡುಕಿ ನಿಲ್ಲಿಸುತ್ತಾರೆ; ಇದಕ್ಕೆ ಜೋತು ಬಿದ್ದವರು ನಾವೆಂದು – ಕೊಕ್ಕೆಗೆ ತಗಲಿಸಿರುವ ಸರಪಣಿ, ಅದೂ ತುಕ್ಕೂ ಹಿಡಿದಿರುವುದು. ತಾತ, ಮುತ್ತಾತನ ಕಾಲದ ಸೂಚ್ಯ ಸರಪಣಿಗೆ ಜೋತು ಬಿಟ್ಟಿರುವ ಧಾರಾ ಪಾತ್ರೆ; ಸರಿಯಾದ ತಳವೇ ಇಲ್ಲದ ನಿರಂತರ ಧಾರೆಯ ಪಾತ್ರೆ. ಹಾಗೆ ನನ್ನ ಕಥಾ ಸಂಗ್ರಹಣೆ ಕಥೆಯ ಅಸ್ಪಷ್ಟತೆಯನ್ನು ಪ್ರತಿಬಿಂಬಿಸುವ ಅರ್ಚಕ ಧಾರಾಪಾತ್ರೆಯಲ್ಲಿ ಅಸ್ಪಷ್ಟವಾಗಿ ಕಾಣುತ್ತಾನೆ. ಅವನು ನಮಗೆ ಸಮಕಾಲೀನನೆಂದೇ ಭಾವಿಸಲು ಅವನ ಕೈಯಲ್ಲಿ ಕೈಗಡಿಯಾರ. ಎರಡನೇ ದೃಶ್ಯ ಮಸಿ ಹಿಡಿದು ಉರಿಯುತ್ತಿರುವ ಲಾಂದ್ರ – ಹಿರಿಯರ ಕಥೆ. ಅಲ್ಲಿ ಗೂಟಕ್ಕೆ ನೇತುಹಾಕಿರುವುದು ಶಬ್ದ ಸತ್ತು ಶವದ ಹೊದಿಕೆ ಹೊದ್ದಿರುವ ಇಂದಿನವರ ಅಶ್ರದ್ಧಾ ಪೂಜೆಯ ಒಣ ಹೂ. ಅರಿಸಿನ, ಕುಂಕುಮ ಹೊತ್ತ ನಮ್ಮ ತಾತ, ಮುತ್ತಾತನ ಕಾಲದ ಮೃದಂಗದ ಮೇಲೆ ಇಂದಿನ ಹಾರ್ಮೋನಿಯಂ ದಾಳಿ, ಅದರೊಂದಿಗೆ ಮುಖವೇ ಕಾಣದವನ ಮಾತು... ಅವರ ಮಾತಿಗೂ ಆ ಮೃದಂಗಕ್ಕೂ ಯಾವುದೋ ನಂಟಿದೆ ಎಂದು ಬೊಟ್ಟು ಮಾಡಿದಾಗ ಶಬ್ದ ಸತ್ತ ಮೃದಂಗ ಜೋತು ಬಿದ್ದಿರುವ ದೃಶ್ಯ. ಮೂರನೇ ದೃಶ್ಯ ಹಳೆಯ ತೊಲೆಯಲ್ಲಿ ಇಳಿಬಿದ್ದ ಹರಕಲು ಬೆತ್ತದ ಚಾಪೆ. ಮಾಸಿದ ಹಾಸಿಗೆ ಕುಡಿದುರುಳಿರುವ ಮದ್ಯದ ಶೀಶೆ, ತಿಂದುಳಿದ ವಡೆ, ಸರಪಣಿ ಬೆಸೆದ ಕವಳ ಕುಟ್ಟುವ ಕುಟ್ಟಾಣಿ ಸೋಲಿಗೆ ಹಿಡಿದ ಮುಡಿಗೈ. ಕಥೆ ಕೇಳಿಯೇ ನರೆತ ನರೆಗೂದಲ ತಲೆಯೊಂದಿಗೇ ಅವಳೂ ಮಾತು ಉಗಿಯುತ್ತಾಳೆ. ಈ ಮೂರು ಷಾಟ್‌ಗಳು ಕಾದಂಬರಿಯ ಮೂವತ್ತು ಪುಟಕ್ಕೂ ಮೀರಿದ ಕಥಾವಸ್ತುವಿನ ಅಡಕವಾಗಿವೆ.

## ಹಿಮಾದ್ರಿಸುತೆ ಪಾಹಿಮಾ...

‘ಹಂಸಗೀತೆ’ಯಲ್ಲಿ ಬರುವ ಸಂಗೀತ ಆಧಾರಿತ ದೃಶ್ಯಗಳನ್ನೇ ಗಮನದಲ್ಲಿಟ್ಟು ನೋಡಿದರೆ, ಮೊದಲು ಕಾಣುವುದು – ಹದಿಹರೆಯದ ವೆಂಕಟಸುಬ್ಬಯ್ಯ ತನ್ನ ಗುರು ತಿರುಮಲಯ್ಯನೊಂದಿಗೆ ಸ್ಪರ್ಧೆಗೆ